**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC.No.448/2023**

PW-3 CW-4

| | | |
|---|---|---|
| ಸಾಕ್ಷಿದಾರನ ಹೆಸರು | : | ಮರಿಯಪ್ಪ ತಂದೆ ಬಸ್ಸಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಎಮನಾಳ |
| ಪ್ರಮಣೀಕರಿಸಿದ ದಿನಾಂಕ | : | **06**-02-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಈಗ ಕಳೆದ **3** ವರ್ಷಗಳ ಹಿಂದೆ ಗಣೇಕಲ ಗ್ರಾಮಕ್ಕೆ ನನ್ನ ಸಂಬಂಧಿಕರ ಮದುವೆ ಹೋದಾಗ ಪಾರ್ವತಿ ಎಂಬುವವರು ಮರಿಯಮ್ಮ ಇವರೊಂದಿಗೆ ಗಲಾಟೆ ಮಾಡಿ ಕುಪ್ಪಸ ಹರೆದಿರುತ್ತಾರೆ**.** ಅಷ್ಟನ್ನು ಹೊರತುಪಡಿಸಿ ನನಗೆ ಬೇರೆ ಏನು ಗೊತ್ತಿರುವುದಿಲ್ಲ**.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿಡಿಸಿ ವಕೀಲರಿಂದ.**

ಪೊಲೀಸರು ಈ ಪ್ರಕರಣ ಕುರಿತು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಗಂಗಪ್ಪನ ಮನೆಯಲ್ಲಿ ಮದುವೆ ಇತ್ತು. ಚಾಸಾ-8 ರವರ ಮನೆಯ ಮುಂದೆ 1 ನೇ ಆರೋಪಿ ಚಾಸಾ-7 ರವರ ಕುಪ್ಪಸ ಹರೆದಿರುತ್ತಾಳೆ. ಸದರಿ ಘಟನೆಯ ಸಂದರ್ಭದಲ್ಲಿ ನಾನು , ನನ್ನ ಹೆಂಡತಿ ಮತ್ತು ಇತರರು ಇದ್ದರು , ಆದರೆ ಉಳಿದವರು ಹೆಸರು ನನಗೆ ಹೇಳಲು ಬರುವುದಿಲ್ಲ. ಘಟನಾ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ. ಚಾಸಾ-8 ನನ್ನ ಅಕ್ಕನ ಗಂಡನಾಗಿರುತ್ತಾನೆ. ನಾನು , ಹನುಮಂತ ಮತ್ತು ಚಾಸಾ-8 ಸಂಬಂಧಿಕಾರದ್ದರಿಂದ ಚಾಸಾ-7 ಮತ್ತು 8 ರವರಿಗೆ ಸಹಾಯ ಮಾಡಲು ಯಾವುದೇ ಘಟನೆ ಆಗದೇ ಇದ್ದರೂ ಘಟನೆ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ-7 ರವರ ಕುಪ್ಪಸ ಹರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.